# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 285 (2014) |
| ಸದಸ್ಯರ ಹೆಸರು | ಶ್ರೀ ಎಂ ಪಿ ಸುನೀಲ್ ಸುಬ್ರಮಣಿ |
| ಉತ್ತರಿಸುವ ದಿನಾಂಕ | 24-03-2021 |
| ಉತ್ತರಿಸುವವರು | ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಕಾಶಿಯಲ್ಲಿರುವ ಕರ್ನಾಟಕ ಛತ್ರ/ಮೈಸೂರು ಛತ್ರದ ಒಟ್ಟು ವಿಸ್ತೀರ್ಣವೆಷ್ಟು; ಇದು ಯಾರ ಒಡೆತನದಲ್ಲಿದೆ; ಇದನ್ನು ಯಾವಾಗ ನಿರ್ಮಿಸಲಾಗಿದೆ; ಇದಕ್ಕೆ ಕಳೆದ ನಾಲ್ಕು ವರ್ಷಗಳಲ್ಲಿ ನೀಡಿರುವ ಅನುದಾನದ ವಿವರಗಳನ್ನು ನೀಡುವುದು; ಇದನ್ನು ನವೀಕರಣ ಮಾಡಲಾಗಿದೆಯೇ; ಇಲ್ಲವಾದಲ್ಲಿ, ನವೀಕರಣ ಮಾಡಲು ಸರ್ಕಾರದ ಕ್ರಮಗಳೇನು; (ವಿವರ ನೀಡುವುದು) | ಉತ್ತರ ಪ್ರದೇಶದ ಕಾಶಿ/ವಾರಣಾಸಿಯಲ್ಲಿರುವ ಕರ್ನಾಟಕ ರಾಜ್ಯ ಛತ್ರ /ಮೈಸೂರು ಛತ್ರದ ಒಟ್ಟು ವಿಸ್ತೀರ್ಣ 134.97 ಚ.ಮೀ. ಸದರಿ ಛತ್ರವು ಕರ್ನಾಟಕ ರಾಜ್ಯ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಯ ಆಡಳಿತ ನಿರ್ವಹಣೆಗೆ ಒಳಪಟ್ಟಿರುತ್ತದೆ.<br>1923ರಲ್ಲಿ ಮೈಸೂರು ಮಹಾರಾಜರಿಂದ ನಿರ್ಮಿಸಲಾದ ಹಳೆಯ ಕಟ್ಟಡ ಹಾಗೂ 2002ರಲ್ಲಿ ನಿರ್ಮಿಸಲಾದ ಹೊಸ ಕಟ್ಟಡಗಳಿರುತ್ತವೆ. ಹಳೆಯ ಕಟ್ಟಡದಲ್ಲಿ 09 ಕೊಠಡಿಗಳು ಮತ್ತು ಹೊಸ ಕಟ್ಟಡದಲ್ಲಿ 09 ಕೊಠಡಿಗಳು ಸೇರಿ ಒಟ್ಟು 18 ಕೊಠಡಿಗಳಿರುತ್ತದೆ.<br>ಸದರಿ ಛತ್ರದ ಸಿಬ್ಬಂದಿಗಳ ವೇತನ ಮತ್ತು ಛತ್ರದ ನಿರ್ವಹಣೆಗಾಗಿ ಕಳೆದ ನಾಲ್ಕು ವರ್ಷಗಳಲ್ಲಿ ಹೊರ ರಾಜ್ಯ ಛತ್ರಗಳ ಸಂಯೋಜಿತ ನಿಧಿಯಿಂದ ರೂ.25,29,866.20/-ಗಳ ಅನುದಾನ ಬಿಡುಗಡೆ ಮಾಡಲಾಗಿದೆ. ವಿವರ ಕೆಳಕಂಡಂತಿದೆ. |

(ರೂ.ಗಳಲ್ಲಿ)

| ಕ್ರ.ಸಂ | ವರ್ಷ | ಮೊತ್ತ |
|---|---|---|
| 1. | 2016-17 | 2,75,803.00 |
| 2. | 2017-18 | 9,63,000.00 |
| 3. | 2018-19 | 5,84,118.00 |
| 4. | 2019-20 | 7,06,945.20 |
| | ಒಟ್ಟು | 25,29,866.20 |

2015-16ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಛತ್ರದ ಕಟ್ಟಡದ ದುರಸ್ಥಿ/ನವೀಕರಣ ಮಾಡಲಾಗಿರುತ್ತದೆ.

.....2

| | | |
|---|---|---|
| ಆ) | ಸದರಿ ಛತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಹುದ್ದೆವಾರು ವೇತನ ವಿವರಗಳೊಂದಿಗೆ ಮಾಹಿತಿ ನೀಡುವುದು) | ಸದರಿ ಛತ್ರಗಳಲ್ಲಿ ಒಟ್ಟು 06 ಅಧಿಕಾರಿ/ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ವಿವರ ಕೆಳಕಂಡಂತಿದೆ.<br>(ರೂ.ಗಳಲ್ಲಿ)<br>(see table below) |
| ಇ) | ಕಾಶಿಗೆ ತೆರಳುವ ರಾಜ್ಯದ ಯಾತ್ರಾರ್ಥಿಗಳಿಗೆ ಇಲಾಖೆ ವತಿಯಿಂದ ನೀಡಲಾಗುವ ಸೌಲಭ್ಯಗಳೇನು; ಇದನ್ನು ರಾಜ್ಯದ ಯಾತ್ರಾರ್ಥಿಗಳಿಗೆ ಪ್ರಚಾರ ಪಡಿಸಲು ಇಲಾಖೆಯ ನಿರ್ಧಾರಗಳೇನು? (ವಿವರ ನೀಡುವುದು) | ಉತ್ತರ ಪ್ರದೇಶದ ಕಾಶಿ/ವಾರಣಾಸಿಗೆ ತೆರಳುವ ರಾಜ್ಯದ ಯಾತ್ರಾರ್ಥಿಗಳಿಗೆ ಧಾರ್ಮಿಕ ದತ್ತಿ ಇಲಾಖಾ ವತಿಯಿಂದ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಛತ್ರದಲ್ಲಿ ವಾಸ್ತವ್ಯ ಮಾಡಲು ಕೊಠಡಿಗಳ ಸೌಲಭ್ಯ ಇರುತ್ತದೆ.<br>ಇದನ್ನು ಧಾರ್ಮಿಕ ದತ್ತಿ ಇಲಾಖೆಯ ಅಧಿಕೃತ ವೆಬ್ ಸೈಟ್‌ನಲ್ಲಿ ಅಳವಡಿಸಿ ಪ್ರಚಾರ ಪಡಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |

| ಕ್ರ. ಸಂ | ಹೆಸರು ಮತ್ತು ಪದನಾಮ | ಪಡೆಯುತ್ತಿರುವ ಮಾಸಿಕ ವೇತನ |
|---|---|---|
| ಇಲಾಖೆ ಹುದ್ದೆ | | |
| 1. | ವ್ಯವಸ್ಥಾಪಕರು | ಹುದ್ದೆ ಖಾಲಿ ಇರುತ್ತದೆ. |
| ಛತ್ರದ ಹುದ್ದೆಗಳು | | |
| 2. | ಸಹಾಯಕರು | 11,703/- |
| 3. | ಅರ್ಚಕರು | 2,500/- |
| 4. | ಕಾವಲುಗಾರ | 4,000/- |
| 5 | ಶುಚಿತ್ವಗಾರರು | 3,000/- |
| 6. | ಸ್ವೀಪರ್ | 3,500/- |

ಸಂಖ್ಯೆ: ಕಂಇ 86 ಮುಸಪ್ರ 2021

(ಕೋಟಾ ಶ್ರೀನಿವಾಸ ಪೂಜಾರಿ)
ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ
ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.